ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು	ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1320
ಉತ್ತರಿಸಬೇಕಾದ ದಿನಾಂಕ	08.03.2022
ಉತ್ತರಿಸಬೇಕಾದ ಸಚಿವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ನಗರ ಮತ್ತು ಪಟ್ಟಣಗಳಿಗೆ ಕಾರ್ಯಗತಗೊಳಿಸಿರುವ ಹಾಗೂ ಕಾರ್ಯಗತಗೊಳಿಸಲು ಉದ್ದೇಶಿಸಿರುವ ಕುಡಿಯುವ ನೀರಿನ ಯೋಜನೆಗಳು ಯಾವುವು; (ಹೆಸರುಗಳೊಂದಿಗೆ ವಿವರ ನೀಡುವುದು)	ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ನಗರ ಮತ್ತು ಪಟ್ಟಣಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕಾರ್ಯಗತಗೊಳಿಸಿರುವ ಹಾಗೂ ಕಾರ್ಯಗತಗೊಳಿಸಲು ಉದ್ದೇಶಿಸಿರುವ ಕುಡಿಯುವ ನೀರಿನ ಯೋಜನೆಗಳು ಈ ಕೆಳಕಂಡಂತಿದೆ: **ಅ) ಬಳ್ಳಾರಿ ಜಿಲ್ಲೆ**:- **ಬಳ್ಳಾರಿ ನಗರ:** ಅಮೃತ್ ಯೋಜನೆಯಡಿ ಬಳ್ಳಾರಿ ನಗರಕ್ಕೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.7000.00 ಲಕ್ಷಗಳಿಗೆ ಕೈಗೊಂಡಿದ್ದು, ಪ್ರಸ್ತುತ ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. ಬಳ್ಳಾರಿ ನಗರದ ಬಾಕಿ ಉಳಿದ 15 ವಲಯಗಳಿಗೆ 24X7 ನೀರು ಸರಬರಾಜು ಮಾಡುವ ಕಾಮಗಾರಿಯ ವಿವರವಾದ ಅಂದಾಜು ಪಟ್ಟಿಯನ್ನು ರೂ.209.64 **ಕೋಟಿ**ಗಳಿಗೆ ತಯಾರಿಸಿ, ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಮಂಡಳಿ ವತಿಯಿಂದ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. **ಸಿರುಗುಪ್ಪ ನಗರ :-** ಬಾಗೇವಾಡಿ ಉಪಕಾಲುವೆ ಮೂಲದಿಂದ ಸಿರುಗುಪ್ಪ ನಗರಕ್ಕೆ ನೀರು ಸರಬರಾಜು ಯೋಜನೆಯಡಿ 2500 ಎಂ.ಎಲ್ ಸಾಮರ್ಥ್ಯದ ಕೆರೆ ನಿರ್ಮಾಣ ಮಾಡುವ ಕಾಮಗಾರಿಯ ಮೂಲ ಅಂದಾಜು ಮೊತ್ತ ರೂ.28.65 ಕೋಟಿಗಳು ಹಾಗೂ ಪರಿಷ್ಕೃತ ಅಂದಾಜು ಮೊತ್ತ ರೂ.45.46 ಕೋಟಿಗಳು, Turfing and BC Blanket ಕಾಮಗಾರಿ ಹೊರತುಪಡಿಸಿ ಕೆರೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸಿರುಗುಪ್ಪ ನಗರಕ್ಕೆ ನೀರು ಸರಬರಾಜು ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರೂ.9840.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುದಾನದ ಕೊರತೆಯಿಂದಾಗಿ ಏಪ್ರಿಲ್ 2023 ರವರೆಗೆ ಹೊಸ ಕಾಮಗಾರಿಗಳನ್ನು ಕೈಗೊಳ್ಳದಂತೆ ಆರ್ಥಿಕ ಇಲಾಖೆಯು ಸೂಚಿಸಿರುವ ಹಿನ್ನಲೆಯಲ್ಲಿ ಸದ್ಯಕ್ಕೆ ಈ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಾಧ್ಯವಾಗಿರುವುದಿಲ್ಲ. ಜಿಲ್ಲಾ ಮೈನಿಂಗ್ ಫಂಡ್ ಕಾಮಗಾರಿಯಡಿ, ಸಿರುಗುಪ್ಪ ಪಟ್ಟಣದ ನೀರು ಸರಬರಾಜು ಯೋಜನೆಯ ಕೆನಾಲ್ ಇಂಟೇಕ್‌ಸ್ಟ್ರಕ್ಚರ್ ನಿರ್ಮಾಣ, ಇಂಟೆಕ್‌ವೆಲ್‌ನಿಂದ ಇಂಪೌಂಡಿಂಗ್ ರಿಜರವಾಯರ್‌ಗೆ ಕೊಳವೆ ಮಾರ್ಗ ಅಳವಡಿಸುವುದು, ಇಂಪೌಂಡಿಂಗ್ ರಿಜರವಾಯರ್‌ನಿಂದ ಜಲಶುದ್ಧೀಕರಣ ಘಟಕದವರೆಗೆ ಡಿ.ಐ ಕಚ್ಚಾ ನೀರು ಏರು ಕೊಳವೆ ಮಾರ್ಗ ಒದಗಿಸಿ ಅಳವಡಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.905.00 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸಂಡೂರು ಪಟ್ಟಣ: 5.18 ಎಂ.ಎಲ್.ಡಿ ನೀರು ಸರಬರಾಜು ಯೋಜನೆಯನ್ನು 2022 ರಲ್ಲಿ ಕಾರ್ಯಗತಗೊಳಿಸಲಾಗಿದೆ. (ಅಂದಾಜು ವೆಚ್ಚ ರೂ.592.23 ಲಕ್ಷಗಳು)

ಆ) ವಿಜಯನಗರ ಜಿಲ್ಲೆ

1) ಹೊಸಪೇಟೆ ನಗರ:- ಅಮೃತ್ ಯೋಜನೆಯಡಿ 11.69 ಎಂ.ಎಲ್.ಡಿ ಸಾಮರ್ಥ್ಯದ ಸಗಟು ನೀರು ಸರಬರಾಜು ವ್ಯವಸ್ಥೆಯನ್ನು 2019 ರಲ್ಲಿ ಕಾರ್ಯಗತಗೊಳಿಸಲಾಗಿದೆ. (ಅಂದಾಜು ವೆಚ್ಚ: ರೂ.5200.00 ಲಕ್ಷಗಳು)

ಕಮಲಾಪುರ ಪಟ್ಟಣ:- 4.54 ಎಂ.ಎಲ್.ಡಿ ನೀರು ಸರಬರಾಜು ಯೋಜನೆಯನ್ನು 2003 ರಲ್ಲಿ ಕಾರ್ಯಗತ ಗೊಳಿಸಲಾಗಿದೆ. (ಅಂದಾಜು ವೆಚ್ಚ ರೂ.223.80 ಲಕ್ಷಗಳು)

ಹಗರಿಬೊಮ್ಮನಹಳ್ಳಿ (3.30 ಎಂ.ಎಲ್.ಡಿ), ಕೂಡ್ಲಿಗಿ (1.93 ಎಂ.ಎಲ್.ಡಿ) ಮತ್ತು ಕೊಟ್ಟೂರು (2.41 ಎಂ.ಎಲ್.ಡಿ) ಪಟ್ಟಣಗಳಿಗೆ 7.65 ಎಂ.ಎಲ್.ಡಿ ನೀರು ಸರಬರಾಜು ಯೋಜನೆಯನ್ನು 2007 ರಲ್ಲಿ ಕಾರ್ಯಗತಗೊಳಿಸಲಾಗಿದೆ. (ಅಂದಾಜು ವೆಚ್ಚ ರೂ.3591.52 ಲಕ್ಷಗಳು)

ಹರಪನಹಳ್ಳಿ ಪಟ್ಟಣ:- ಪಟ್ಟಣಕ್ಕೆ 10.75 ಎಂ.ಎಲ್.ಡಿ ನೀರು ಸರಬರಾಜು ಯೋಜನೆಯನ್ನು 2005 ರಲ್ಲಿ ಕಾರ್ಯಗತ ಗೊಳಿಸಲಾಗಿದೆ. (ಅಂದಾಜು ವೆಚ್ಚ ರೂ.1529.89 ಲಕ್ಷಗಳು)

ಹೂವಿನ ಹಡಗಲಿ:- 10.54 ಎಂ.ಎಲ್.ಡಿ ನೀರು ಸರಬರಾಜು ಯೋಜನೆಯನ್ನು 2016 ರಲ್ಲಿ ಕಾರ್ಯಗತಗೊಳಿಸಲಾಗಿದೆ. (ಅಂದಾಜು ವೆಚ್ಚ : ರೂ.1994.00 ಲಕ್ಷಗಳು)

ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ)

ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ದಡಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮತ್ತು ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ ಕುಡಿಯುವ ನೀರು ಸರಬರಾಜು ಕಾಮಗಾರಿಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

9 ಪಟ್ಟಣಗಳ ಕುಡಿಯುವ ನೀರಿನ ಯೋಜನೆ

ಪರಿಷ್ಕೃತ ಸರ್ಕಾರಿ ಆದೇಶ ಸಂಖ್ಯೆ: ನಅಇ 14 ಪಿಆರ್‌ಜೆ 2012, ದಿನಾಂಕ 15.12.2017 ರಲ್ಲಿ ರಾಜ್ಯದ 9 ಪಟ್ಟಣಗಳಿಗೆ ರೂ.205.87 ಕೋಟಿ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ನೀಡಿದೆ.

9 ಪಟ್ಟಣಗಳ ಯೋಜನೆಯಡಿಯಲ್ಲಿ ಹಾಲಿ ಇರುವ ಕುಡಿಯುವ ನೀರಿನ ಯೋಜನೆಯ ಉನ್ನತೀಕರಣ ಕಾಮಗಾರಿಯನ್ನು ಮುಲ್ಕಿ, ಮುಂಡರಗಿ, ಕೊಟ್ಟೂರು, ತೆಕ್ಕಲಕೋಟೆ, ತೆರದಾಳ್, ಮಹಾಲಿಂಗಪುರ, ಕಂಪ್ಲಿ, ಮುದಗಲ್ ಮತ್ತು ಕೆ.ಅರ್ ಪೇಟೆ ಪಟ್ಟಣಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ.

ಅವುಗಳಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಕಂಪ್ಲಿ, ತೆಕ್ಕಲಕೋಟೆ ಮತ್ತು ಕೊಟ್ಟೂರು ಪಟ್ಟಣಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಆ)	ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ನಗರ ಮತ್ತು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗಳ ಕುರಿತು ಡಿ.ಪಿ.ಆರ್ ಗಳನ್ನು ಸಿದ್ಧಪಡಿಸಲಾಗುತ್ತಿದೆಯೇ? (ಮಾಹಿತಿ ನೀಡುವುದು)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ನಗರ ಮತ್ತು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗಳ ಕುರಿತು ಮಂಡಳಿ ವತಿಯಿಂದ ಡಿ.ಪಿ.ಆರ್‌ಗಳನ್ನು ಸಿದ್ಧಪಡಿಸಲಾಗುತ್ತಿರುವ ವಿವರಗಳು ಈ ಕೆಳಗಿನಂತಿವೆ. **ಅ) ಬಳ್ಳಾರಿ ಜಿಲ್ಲೆ:-** ಕುಡುತಿನಿ ಪಟ್ಟಣ:-ಕುಡುತಿನಿ ಪಟ್ಟಣಕ್ಕೆ ನಾರಾಯಣಪುರ ಜಲಾಶಯದಿಂದ ಬಳ್ಳಾರಿ ನಗರಕ್ಕೆ ಸರಬರಾಜು ಮಾಡುವ ಕೊಳವೆ ಮಾರ್ಗದಿಂದ ಟ್ಯಾಪಿಂಗ್ ಮೂಲಕ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವುದಕ್ಕೆ ಸರ್ವೆ ಕಾಮಗಾರಿ ಪೂರ್ಣಗೊಂಡಿದ್ದು, ಪ್ರಸ್ತುತ ಡಿ.ಪಿ.ಆರ್ ತಯಾರಿಸುವ ಹಂತದಲ್ಲಿರುತ್ತದೆ. ಸಂಡೂರು ಪಟ್ಟಣ:-ಡಿ.ಎಂ.ಎಫ್ ಅನುದಾನದಡಿ ನಾರಿಹಳ್ಳ ಜಲಾಶಯದಿಂದ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಡಿ.ಪಿ.ಆರ್ ತಯಾರಿಸುವ ಹಂತದಲ್ಲಿರುತ್ತದೆ. ಕುರೆಕುಪ್ಪ ಪಟ್ಟಣ:- ನೀರು ಸರಬರಾಜು ವಿತರಣಾ ಜಾಲ ವ್ಯವಸ್ಥೆ ಕಲ್ಪಿಸಲು ಡಿ.ಪಿ.ಆರ್ ತಯಾರಿಸುವ ಕೆಲಸ ಪ್ರಗತಿಯಲ್ಲಿದೆ ಮತ್ತು ಗ್ರಾಮೀಣ ನೀರು ಸರಬರಾಜು ಮಂಡಳಿಯಿಂದ ರಾಯಬಸವ ಕಾಲುವೆಯಿಂದ ಸಗಟು ನೀರು ಸರಬರಾಜು ಯೋಜನೆಯು ಅನುಮೋದನೆ ಹಂತದಲ್ಲಿದೆ. **ಆ) ವಿಜಯನಗರ ಜಿಲ್ಲೆ** 1. ಕಮಲಾಪುರ ಪಟ್ಟಣ:- ಪವರ್ ಕಾಲುವೆಯಿಂದ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಡಿ.ಪಿ.ಆರ್ ತಯಾರಿಸುವ ಹಂತದಲ್ಲಿರುತ್ತದೆ. 2. ಮರಿಯಮ್ಮನಹಳ್ಳಿ ಪಟ್ಟಣ:- ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಡಿ.ಪಿ.ಆರ್ ತಯಾರಿಸುವ ಹಂತದಲ್ಲಿರುತ್ತದೆ. ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಎ.ಡಿ.ಬಿ ಯಿಂದ ಬರಬೇಕಾಗಿದ್ದ ನೆರವು ಡಿಸೆಂಬರ್ 2016ಕ್ಕೆ ಮುಕ್ತಾಯವಾಗಿರುತ್ತದೆ. ಉಳಿದ ಕಾಮಗಾರಿಗಳನ್ನು ಸರ್ಕಾರದ ಅನುಮೋದನೆ ಮೇರೆಗೆ ವಾಣಿಜ್ಯ ಬ್ಯಾಂಕ್ ನಿಂದ ಸಾಲ ಪಡೆದು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. ಆದುದರಿಂದ ಪ್ರಸ್ತುತ ಈ ಯೋಜನೆಯಡಿ ಯಾವುದೇ ಹೊಸ ಡಿ.ಪಿ.ಆರ್ ಸಿದ್ಧಪಡಿಸುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ನಅಇ 42 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ವಿಧಾನ ಪರಿಷತ್ತು ಪ್ರಶ್ನೆ ಸಂಖ್ಯೆ 15(60) ಅನುಬಂಧ -1

ವಿ.ಪ. ಪ್ರಶ್ನೆ ಸಂಖ್ಯೆ : 152 (1320)

ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ "ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ" ದಡಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು ಕಾಮಗಾರಿಗಳ ವಿವರ.

ಕ್ರ ಸಂ.	ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಕಾಮಗಾರಿ ಹೆಸರು	ಪರಿಷ್ಕೃತ ಗುತ್ತಿಗೆ ಮೊತ್ತ (ರೂ.ಕೋಟಿ)	ಗುತ್ತಿಗೆದಾರರ ಹೆಸರು	ಗುತ್ತಿಗೆ ಪ್ರಾರಂಭ ದಿನಾಂಕ	ಕಾಮಗಾರಿ ವಿವರ	ಗುತ್ತಿಗೆ ಮುಕ್ತಾಯದ ದಿನಾಂಕ	ಖರ್ಚು ಮೊತ್ತ (ರೂ.ಕೋಟಿ)	ಷರ
1	ಬಳ್ಳಾರಿ	ಬಳ್ಳಾರಿ	ಸಗಟು ನೀರು ಸರಬರಾಜು ವ್ಯವಸ್ಥೆ ಸುಧಾರಣೆ (ಪ್ಯಾಕೇಜು-02ಬಿಎಲ್‌ವೈ01ಎ).	42.19	ಮೆ//ಐವಿಆರ್‌ಸಿಎಲ್ ಮತ್ತು ಸಾಯಿ ಸುಧೀರ್ (ಜೆವಿ)	27.04.2011	ಮೂಲ ಸ್ಥಾವರ : 1 ಸಂಖ್ಯೆ ಏರು ಕೊಳವೆ : 14.55 ಕಿಮಿ ಫ್ಲೋ ಮೀಟರ್ : 10 ಸಂಖ್ಯೆ	26.02.2016	42.19	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.
2		ಬಳ್ಳಾರಿ	ಬಳ್ಳಾರಿ ನಗರದ ಅಲಿಪುರ್ ಹಾಗೂ ಸಂಗನಕಲ್‌ನಲ್ಲಿ ನೀರು ಶುದ್ಧೀಕರಣ ಘಟಕ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜು-02ಬಿಎಲ್‌ವೈ01ಬಿ).	46.49	ಮೆ//ಐವಿಆರ್‌ಸಿಎಲ್ ಮತ್ತು ಸಾಯಿ ಸುಧೀರ್ (ಜೆವಿ)	17.10.2011	ಜಲ ಶುದ್ಧೀಕರಣ ಗಾರ : 2 ಸಂಖ್ಯೆ (20+15 ಎಂಎಲ್‌ಡಿ) ಕಚ್ಚಾ ನೀರು ಏರು ಕೊಳವೆ ಮತ್ತು ಶುದ್ಧ ನೀರು ಏರು ಕೊಳವೆ : 15.22 ಕಿಮಿ ಫ್ಲೋ ಮೀಟರ್ : 6 ಸಂಖ್ಯೆ	12.09.2017	46.49	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.
3		ಬಳ್ಳಾರಿ	ಬಳ್ಳಾರಿ ನಗರದಲ್ಲಿ ಫೀಡರ್ ಮೈನ್, ವಿತರಣ ಜಾಲ, ಎಂ.ಬಿ.ಆರ್ ನಿರ್ಮಾಣ (ಪ್ಯಾಕೇಜು-02ಬಿಎಲ್‌ವೈ01ಸಿ).	32.51	ಮೆ//ಎಸ್‌ಎಂಸಿ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ.	27.04.2011	ಮುಖ್ಯ ಕೊಳವೆ ಮಾರ್ಗ : 22.6 ಕಿಮಿ ವಿತರಣಾ ಜಾಲ : 171 ಕಿಮಿ ಮೇಲೆತ್ತರದ ಜಲಸಂಗ್ರಹಗಾರ : 4 ಸಂಖ್ಯೆ	25.10.2017	32.5	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.
4		ಬಳ್ಳಾರಿ	ಹೆಡ್ ವರ್ಕ್ಸ್‌ಗೆ ರಸ್ತೆ ಮಾರ್ಗ, ಕಾವಲುಗಾರರ ಕೊಠಡಿ ನಿರ್ಮಾಣ (ಪ್ಯಾಕೇಜು ಸಂಖ್ಯೆ 02ಬಿಎಲ್‌ವೈ01ಡಿ)	0.5	ಶ್ರೀ.ಸಿದ್ದರಾಮಣ್ಣ	24.05.2016	ಮೋಕ ಮೂಲ ಸ್ಥಾವರಕ್ಕೆ ರಸ್ತೆ ನಿರ್ಮಾಣ ಮತ್ತು ಕಾವಲುಗಾರರ ಕೊಠಡಿ.	24.11.2016	0.5	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.
5		ಬಳ್ಳಾರಿ	ನೀರು ಸರಬರಾಜು - ಮೋಕಾ ಹೆಡ್ ವರ್ಕ್ಸ್ ಹತ್ತಿರ ತಡೆ ಗೋಡೆ ಮತ್ತು ಪೈಪ್ ಕಲ್‌ವರ್ಟ್ ನಿರ್ಮಾಣ (ಪ್ಯಾಕೇಜು ಸಂಖ್ಯೆ 02ಬಿಎಲ್‌ವೈ01ಇ)	0.55	ಶ್ರೀ.ಸಿದ್ದರಾಮಣ್ಣ	01.01.2016	ಮೋಕಾ ಮೂಲ ಸ್ಥಾವರಕ್ಕೆ ಕಾಂಪೌಂಡು ಗೋಡೆ ಮತ್ತು ಪೈಪ್ ಕಿರು ಸೇತುವೆ ನಿರ್ಮಾಣ	30.06.2016	0.55	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.

ಕ್ರ. ಸಂ.	ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಕಾಮಗಾರಿ ಹೆಸರು	ಪರಿಷ್ಕೃತ ಗುತ್ತಿಗೆ ಮೊತ್ತ (ರೂ.ಕೋಟಿ)	ಗುತ್ತಿಗೆದಾರರ ಹೆಸರು	ಗುತ್ತಿಗೆ ಪ್ರಾರಂಭ ದಿನಾಂಕ	ಕಾಮಗಾರಿ ವಿವರ	ಗುತ್ತಿಗೆ ಮುಕ್ತಾಯದ ದಿನಾಂಕ	ಖರ್ಚು ಮೊತ್ತ (ರೂ.ಕೋಟಿ)	ಷರ
6		ಬಳ್ಳಾರಿ	ಬಳ್ಳಾರಿ ನಗರದಲ್ಲಿ ನೀರು ಸರಬರಾಜು ಸುದಾರಣೆ– ಟ್ರೆಂಚ್ ಲೆಸ್ ತಂತ್ರಜ್ಞಾನದ 1067 ಎಂಎಂ ಎಂಎಸ್ ಪೈಪ್ ಅನ್ನು 150 ಎಂಎಂ ಡಯಾ ಎಂಎಸ್ ಪೈಪ್ ರೈಲ್ವೇ ಲೈನ್ ಅಡ್ಡಲಾಗಿ ಆಲಿಮರ್ ನೀರು ಶುದ್ಧೀಕರಣ ಘಟಕದ ಹತ್ತಿರ 85.30 ಮೀ . ಪೈಪ್ ಅಳವಡಿಕೆ (ಪ್ಯಾಕೇಜು ಸಂಖ್ಯೆ 02ಬಿಎಲ್‌ವೈ01ಎಫ್)	1.72	ಮೆ//ಅಯ್ಯಪ್ಪ ಇನ್ಫ್ರಾ ಪ್ರಾಜೆಕ್ಟ್ಸ್ ಪ್ರೈ.ಲಿ.	20.05.2016	ಅಲೀಪುರ ಜಲ ಶುದ್ಧೀಕರಣಗಾರ ಹತ್ತಿರ ಶುದ್ಧ ಏರು ಕೊಳವೆ ಅಳವಡಿಸಲು ರೈಲ್ವೇ ಕ್ರಾಸಿಂಗ್ ಮಾಡಲು ಕಂದಕ ರಹಿತ ಕಾಮಗಾರಿ	28.12.2016	1.72	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.
7		ಬಳ್ಳಾರಿ	ಬಳ್ಳಾರಿ ನಗರದಲ್ಲಿ ನೀರು ಶುದ್ಧೀಕರಣ ಘಟಕಕ್ಕಾಗಿ ರಸ್ತೆ ಮಾರ್ಗ ನಿರ್ಮಾಣ, ಕಾವಲುಗಾರರ ಕೊಠಡಿ ಮತ್ತು ಶೌಚಾಲಯ ನಿರ್ಮಾಣ (ಪ್ಯಾಕೇಜು ಸಂಖ್ಯೆ 02ಬಿಎಲ್‌ವೈ01ಜಿ)	0.52	ಮೆ//ಎಂ.ರವೀಂದ್ರ ನಾಥ್	25.07.2016	ಸಂಗನಕಲ್ ಜಲಶುದ್ಧೀಕರಣಗಾರದಲ್ಲಿ ರಸ್ತೆ ಮಾರ್ಗ, ಕಾಂಪೌಂಡ್ ಗೋಡೆ, ಕಾವಲುಗಾರರ ಕೊಠಡಿ ಮತ್ತು ಶೌಚಾಲಯ ನಿರ್ಮಿಸುವ ಕಾಮಗಾರಿ	25.01.2017	0.52	ಕಾಮಗಾರಿ ಪೂರ್ಣಗೊಂಡಿದೆ. ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ.
8		ಬಳ್ಳಾರಿ	24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು–04ಬಿಎಲ್‌ವೈ01).	74.18	ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ.	31.01.2015	ಮುಖ್ಯ ಕೊಳವೆ ಮಾರ್ಗ : 0.88 ಕಿಮಿ ವಿತರಣಾ ಜಾಲ : 475.00 ಕಿಮಿ ಮನೆಗಳಿಗೆ ನಳ ಸಂಪರ್ಕ :52169 ಸಂಖ್ಯೆ (28 ವಲಯಗಳಿಗೆ)		52.97	ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 15 ವಲಯ KUWS&DB ವತಿಯಿಂದ ಪ್ರಸ್ತಾಪಿಸಲಾಗಿದೆ.
9	ವಿಜಯನಗರ	ಹೊಸಪೇಟೆ	ಹೊಸಪೇಟೆ ನಗರಸಭೆಯಲ್ಲಿ ನೀರು ಸರಬರಾಜು ಸುಧಾರಣೆ (ಪ್ಯಾಕೇಜು–01ಹೆಚ್‌ಪಿಟಿ01).	15.25	ಮೆ//ಸಾಯಿ ಸುಧೀರ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ	01.03.2010	ವಿತರಣಾ ಜಾಲ : 127.85 ಕಿಮಿ ಮೇಲ್ತರದ ಜಲಾಶಯ : 3 ಸಂಖ್ಯೆ ನೆಲ ಮಟ್ಟದ ಜಲಾಶಯ : 1 ಸಂಖ್ಯೆ ಜಲ ಶುದ್ಧೀಕರಣಗಾರ : 1 ಸಂಖ್ಯೆ (9 ಎಂಎಲ್‌ಡಿ) ಎಲ್ಕಟ್ರೋ ಮೆಕ್ಯಾನಿಕಲ್ ಉಪಕರಣಗಳು	31.12.2013	15.24	ಕಾಮಗಾರಿ ಪೂರ್ಣಗೊಂಡಿದೆ. ನಗರಸಭೆಗೆ ಹಸ್ತಾಂತರಿಸಲಾಗಿದೆ.

ಕ್ರ ಸಂ.	ಜಿಲ್ಲೆ	ನಗರ ಸ್ಥಳೀಯ ಸಂಸ್ಥೆ	ಕಾಮಗಾರಿ ಹೆಸರು	ಪರಿಷ್ಕೃತ ಗುತ್ತಿಗೆ ಮೊತ್ತ (ರೂ.ಕೋಟಿ)	ಗುತ್ತಿಗೆದಾರರ ಹೆಸರು	ಗುತ್ತಿಗೆ ಪ್ರಾರಂಭ ದಿನಾಂಕ	ಕಾಮಗಾರಿ ವಿವರ	ಗುತ್ತಿಗೆ ಮುಕ್ತಾಯದ ದಿನಾಂಕ	ಖರ್ಚು ಮೊತ್ತ (ರೂ.ಕೋಟಿ)	ಷರ
10		ಹೊಸಪೇಟೆ	24/7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಹೆಚ್‌ಪಿಟಿ01)	58.11	ಮೆ//ಎಸ್‌ಪಿಎಂಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ.	05.02.2015	ಡಿಐ ಕೊಳವೆ ಮಾರ್ಗ: 2.86 ಕಿಮಿ 600 ಎಂಎಂ ಡಿಐ ಕೆ-7 ಕೊಳವೆ : 3.95 ಕಿಮಿ ವಿತರಣಾ ಜಾಲ: 239.48 ಕಿಮಿ ಮನೆಗಳಿಗೆ ನಳ ಸಂಪರ್ಕ: 42705 ಸಂಖ್ಯೆ		45.17	ಕಾಮಗಾರಿ ಪ್ರಗತಿಯಲ್ಲಿದೆ

ಅನುಬಂಧ - 2

ಕ್ರ. ಸಂ.	ಜಿಲ್ಲೆ	ಪಟ್ಟಣಗಳ ಹೆಸರು	ಕಾಮಗಾರಿಯ ಗುತ್ತಿಗೆ ಮೊತ್ತ (ರೂ. ಕೋಟಿಗಳಲ್ಲಿ)	ಟೆಂಡರ್ ಗುತ್ತಿಗೆ ನೀಡಿದ ದಿನಾಂಕ	ಮುಕ್ತಾಯ ದಿನಾಂಕ	ಭೌತಿಕ ಪ್ರಗತಿ (%)	ಆರ್ಥಿಕ ಪ್ರಗತಿ ಫೆಭ್ರವರಿ 2022 ರ ಅಂತ್ಯದವರೆಗೆ (ರೂ. ಕೋಟಿಗಳಲ್ಲಿ)	ಕಾಮಗಾರಿಗಳ ವಿವರ
1	ಬಳ್ಳಾರಿ	ಕಂಪ್ಲಿ	23.19	13.03.2018	31.10.2020	100%	22.54	ಕಾಮಗಾರಿ ಪೂರ್ಣಗೊಂಡಿದೆ.
2	ಬಳ್ಳಾರಿ	ತೆಕ್ಕಲಕೋಟೆ	21.73	08.03.2018	30.06.2022	48%	8.16	ಪ್ರಗತಿಯಲ್ಲಿರುತ್ತದೆ
3	ವಿಜಯನಗರ	ಕೊಟ್ಟುರು	13.55	09.03.2018	31.05.2022	42%	5.11	ಪ್ರಗತಿಯಲ್ಲಿರುತ್ತದೆ
			58.47					